ಕನ್ನಡ ರಾಜ್ಯೋತ್ಸವ ಆಚರಣೆಗೆ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆಯಾದ ಅನುದಾನವನ್ನು ಜಿಲ್ಲಾಡಳಿತ ಸಮರ್ಪಕವಾಗಿ ಬಳಕೆ ಮಾಡಿಲ್ಲ.

• **ಅಶೋಕ ಚಂದರಗಿ** ಕನ್ನಡಪರ ಹೋರಾಟಗಾರ

ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ: 30 ವರ್ಷ ಶಿಕ್ಷೆ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ನೇಸರಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅಪ್ರಾಪ್ತ ಬಾಲಕಿಯ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಅಪರಾಧಿಗೆ 30 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ವಿಶೇಷ ಶೀಘ್ರಗತಿ ಪೋಕ್ಸೋ ನ್ಯಾಯಾಲಯ-1 ತೀರ್ಪು ನೀಡಿದೆ.



ಗೋಕಾಕ ತಾಲೂಕಿನ ಹೀರೆಹಟ್ಟಿ ಗ್ರಾಮದ ಲಕ್ಷ್ಮಣ ಹನುಮಂತ ಮೊಲಗೋಡ (28) ಶಿಕ್ಷೆಗೆ ಗುರಿಯಾದ ಅಪರಾಧಿ. 27.1.2022ರಂದು ಶಾಲೆಯಿಂದ ಮನೆಗೆ ತೆರಳುತ್ತಿದ್ದ ವೇಳೆ ಸುಳ್ಳು ಹೇಳಿ ತನ್ನ ಮೋಟಾರ್ ಸೈಕಲ್‌ನಲ್ಲಿ ಕರೆದೊಯ್ದು ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಬಗ್ಗೆ ನೇಸರಗಿ ಠಾಣೆಯ ಪಿಎಸ್ಐ ವೈ.ಎಲ್.ಶೀಗಿಹಳ್ಳಿ, ಸಿಪಿಐ ಯು.ಎಚ್.ಸಾತೇನಹಳ್ಳಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶೆ ಸಿ.ಎಂ.ಪುಷ್ಪಲತಾ ಅವರು ಪ್ರಕರಣದಲ್ಲಿ ಒಟ್ಟು 11 ಸಾಕ್ಷಿಗಳು, 71 ದಾಖಲೆಗಳು 14 ಮುದ್ದೆಮಾಲುಗಳ ಆಧಾರದ ಮೇಲೆ ಆರೋಪಗಳು ಸಾಬೀತಾಗಿವೆ ಎಂದು ತೀರ್ಮಾನಿಸಿ, ಅಪರಾಧಿಗೆ 30 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದರು. ಇದೇ ವೇಳೆ, ನೊಂದ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ₹4 ಲಕ್ಷ ಪರಿಹಾರ ಧನ ನೀಡಲು ನ್ಯಾಯಾಲಯ ಆದೇಶಿಸಿದೆ. ಪರಿಹಾರ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿಯಾಗಿ ಇಡುವಂತೆ ಸೂಚನೆ ನೀಡಿದೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಎಲ್.ವಿ.ಪಾಟೀಲ ವಾದ ಮಂಡಿಸಿದ್ದರು.

ತಲ್ವಾರ್‌ನಿಂದ ವ್ಯಕ್ತಿ ಮೇಲೆ ಹಲ್ಲೆ

ಘಟನೆ ಸ್ಥಳಕ್ಕೆ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಅನಾಮಧೇಯ ವ್ಯಕ್ತಿಗಳ ಗುಂಪೊಂದು ಯುವಕನ ಮೇಲೆ ತಲ್ವಾರ್‌ನಿಂದ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ತಡರಾತ್ರಿ ಬೆಳಗಾವಿ ಜಿಲ್ಲೆಯ ಸಂಕೇಶ್ವರ ಪಟ್ಟಣದಲ್ಲಿ ನಡೆದಿದೆ.

ಹುಕ್ಕೇರಿ ತಾಲೂಕಿನ ನಿವಾಸಿ ದತ್ತಾ ಥೋರವಾತ್(40) ಎಂಬಾತನ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದು, ಅವನ ಕೈ ಹಾಗೂ ಕುತ್ತಿಗೆಯ ಭಾಗಕ್ಕೆ ತಲ್ವಾರ್‌ನಿಂದ ಹಲ್ಲೆ ನಡೆಸಿದ್ದು, ಗಂಭೀರ ಗಾಯಗಳಾಗಿವೆ. ಹಲ್ಲೆ ನಡೆಸಿದ ಆರೋಪಿಗಳು ಬಳಿಕ ಸ್ಥಳದಿಂದ ಪರಾರಿಯಾಗಿದ್ದಾರೆ. ಗಂಭೀರವಾಗಿದ್ದ ದತ್ತಾ ಅವರನ್ನು ಮಹಾರಾಷ್ಟ್ರದ ಗಡಹಿಂಗ್ಲಜ ಪಟ್ಟಣದ ಖಾಸಗಿ ಆಸ್ಪತ್ರೆಗೆ ರವಾನಿಸಿ, ಚಿಕಿತ್ಸೆ ಮುಂದುವರಿದಿದೆ.

ಘಟನೆಯ ಹಿನ್ನೆಲೆಯಲ್ಲಿ ಸ್ಥಳಕ್ಕೆ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಸಂಕೇಶ್ವರ ಪಟ್ಟಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.

ಈ ಸಂಬಂಧ ಸಂಕೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದಾರೆ. ಘಟನೆಯಿಂದ ಪಟ್ಟಣದಲ್ಲಿ ತ್ವೇಷದ ವಾತಾವರಣ ನಿರ್ಮಾಣಗೊಂಡಿದ್ದು, ಪೊಲೀಸರು ಸಾರ್ವಜನಿಕರು ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ.

ಜಿಲ್ಲಾಧಿಕಾರಿ ರೋಷನ್ ವಿರುದ್ಧ ಸಿಎಂಗೆ ದೂರು

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಕನ್ನಡ ರಾಜ್ಯೋತ್ಸವ ಆಚರಣೆಗೆ ಪ್ರವಾಸೋದ್ಯಮ ಇಲಾಖೆಯಿಂದ ಬಿಡುಗಡೆಯಾದ ಅನುದಾನವನ್ನು ಜಿಲ್ಲಾಡಳಿತ ಸಮರ್ಪಕವಾಗಿ ಬಳಕೆ ಮಾಡಿಲ್ಲ. ಕನ್ನಡ ಹಬ್ಬ ವಿಚಾರದಲ್ಲಿ ಜಿಲ್ಲಾಧಿಕಾರಿ ಕನ್ನಡಪರ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯ ತೀರ್ಮಾನ ಕೈಗೊಂಡಿದ್ದಾರೆ. ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮುಖ್ಯಮಂತ್ರಿ, ಪ್ರವಾಸೋದ್ಯಮ ಸಚಿವರಿಗೆ ಮತ್ತು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗುವುದು ಎಂದು ಹಿರಿಯ ಕನ್ನಡಪರ ಹೋರಾಟಗಾರ ಅಶೋಕ ಚಂದರಗಿ ತಿಳಿಸಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಹಬ್ಬ ಕಾರ್ಯಕ್ರಮ ವಿಚಾರದಲ್ಲಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಮಾಧ್ಯಮಗಳಿಗೆ ತಪ್ಪು ಮಾಹಿತಿ ನೀಡಿದ್ದಾರೆ. ಕನ್ನಡಪರ ಸಂಘಟನೆಗಳೊಂದಿಗೆ ಎಂಟು ಬಾರಿ ಸಭೆ ನಡೆಸಿದ್ದೇನೆ ಎಂದು ಸುಳ್ಳು ಹೇಳಿಕೆ ನೀಡಿರುವುದು ಖಂಡನೀಯ. ಕನ್ನಡಪರ ಸಂಘಟನೆಗಳೊಂದಿಗೆ ಸಂವಹನ ಕೊರತೆಯಾಗಿದೆ ಎಂದು ಜಿಲ್ಲಾಧಿಕಾರಿಯೇ ಒಪ್ಪಿಕೊಂಡಿರುವುದು ದ್ವಂದ್ವ ನಿಲುವು ತೋರಿಸುತ್ತದೆ ಎಂದು ಟೀಕಿಸಿದರು.

ಸರ್ಕಾರದ ಸುತ್ತೋಲೆಯಲ್ಲಿ ಕನ್ನಡಪರ ಸಂಘಟನೆಗಳ ಮೂಲಕವೇ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದರೆ, ಅದನ್ನು ಉಲ್ಲಂಘಿಸಿ ಏಕಪಕ್ಷೀಯವಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ಸುಮಾರು ₹ 3 ಲಕ್ಷ ಸಂಘಟನೆಗಳ ಅನುಮತಿ ಇಲ್ಲದೆ ಬೇರೊಂದು ಕಾರ್ಯಕ್ರಮಕ್ಕೆ ನೀಡಿರುವುದು ಹಾಗೂ ನಾಡಹಬ್ಬ ರಸಮಂಜರಿ ಕಾರ್ಯಕ್ರಮವನ್ನು ಪೂರ್ವ ಮಾಹಿತಿ ಇಲ್ಲದೆ ಆಯೋಜಿಸಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಹೇಳಿದರು.

ರಾಜ್ಯೋತ್ಸವದ ಅನುದಾನದಲ್ಲಿ ಅನೇಕ ಕಾರ್ಯಕ್ರಮ ನಡೆಸಬಹುದಾಗಿದ್ದರೂ, ಒಂದೇ ಕಾರ್ಯಕ್ರಮಕ್ಕೆ ಹೆಚ್ಚಿನ ಮೊತ್ತ ವ್ಯಯಿಸಿ ತರಾತುರಿಯಲ್ಲಿ ಆಚರಣೆ ಮಾಡುತ್ತಿರುವುದು ಸರಿಯಾದ ಕ್ರಮವಲ್ಲ. ಜಿಲ್ಲಾಧಿಕಾರಿ ಸರ್ವಾಧಿಕಾರಿ ಧೋರಣೆ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಹೇಳಿದರು. ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ(ಶಿವರಾಮೇಗೌಡ ಬಣ) ಜಿಲ್ಲಾಧ್ಯಕ್ಷ ವಾಜೀದ ಹಿರೇಕೂಡಿ, ಶ್ರೀನಿವಾಸ ತಾಳೂಕರ, ಕಸ್ತೂರಿ ಭಾವಿ ಇದ್ದರು.

CHANGE OF NAME

I, AISHWARYA NIKHIL BHOSALE (After marriage name) R/o: Hanshetti Park, Nipani, Tal: Nipani, Dist: Belagavi have changed my name from **AISHWARYA SHANTHARAM (Before Marriage name) to AISHWARYA NIKHIL BHOSALE (After marriage name)** for all purpose Vide affidavit sworn before Advocate & Notary Smt. A H Suryawanshi Nipani Dated: 31-12-2025

O.S. No. 160/2016

IN THE COURT OF THE ADDL. SENIOR CIVIL JUDGE ATHANI. AT: ATHANI

1. Rama @ Ramachandra Tubake ...Plaintiff

V/s.

1. Narayan Janawad and others ...Defendants

DRAFT SUIT NOTICE TO THE DEFENDANT NO. 1D TO 1F AS PER THE ORDER V RULE 20-A CPC.

To,

1] The Defendant No.1D:- Sunanda @ Nanda D/o Narayan Janawad, Age: 43 years, Occ.: Household work, Redderatti Tq. Athani, Dist. Belagavi

2] The Defendant No.1E:- Geeta @ Geetawwa W/o Tanaji Nayik, Age: 39 years, Occ.: Household work, Redderatti Tq. Athani, Dist. Belagavi

3] The Defendant No.1F:- Mala @ Malashri W/o Maruti Nayik, Age: 45 years, Occ.: Household work, Redderatti Tq. Athani, Dist. Belagavi

Whereas above said Plaintiff Rama @ Ramachandra Tubake and his legal heirs, have instituted a above said suit for partition and separate possession in respect of Sy.No. 398/1+2 measuring 24 acres 19 guntas Satti village of Athani taluka. The above named Plaintiffs have filed I.A. No.13 to 15 for bringing the legal heirs of Defendant No.1. You, as Defendant No.1D to 1F. You are hereby summoned to appear in this Court in person or by a pleader duly instructed and able to answer all material questions relating to the above said applications, or who shall be accompanied by some person able to answer all such questions on the 10/04/2026 at about 10:00 'O' Clock to answer the claim, and as the day fixed for the final disposal of the said application. You must be prepared to produce on that day and all the documents upon which you intended to rely in support of your defense.

Take notice that, in default of your appearance on the day before mentioned the above the said I.A. No. 13 to 15 will be heard and determined in your absence.

Given under my hand and the seal of the Court, this 23/02/2026.

Place: Athani

By order of the Court
Sd/- **Sheristedar (Adm)**
Pri. Senior Civil Judge Court Athani

Sd/- **S. N. Kulkarni**
Advocate for Plaintiff (Seal)

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000/ ಫ್ಯಾಕ್ಸ್: +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	72069653	ಆಸ್ತಿ ಮೇಲಿನ ಸಾಲ	1. ಸದಾಶಿವ್ ಗೋಡಿಗೌಡರ್ 2. ಬಸವಂತಪ್ಪ ಗೋಡಿಗೌಡರ್	30.01.2026	ಐಎನ್‌ಆರ್ 8,13,651.60/-
ಆಸ್ತಿ ವಿಳಾಸ : ಸಕಲ ಸಮಸ್ತವೂ ಸೇರಿದಂತೆ ವಿಪಿಸಿ ಸಂ. 607, ಮುನ್ಯಾಲ್ ಗ್ರಾಮ, ಪ್ರದೇಶ 30 ಅಡಿ x 40 ಅಡಿ = 1200 ಚದರ ಅಡಿ, ವಿಳಾಸ: ಮುನ್ಯಾಲ್ ಗ್ರಾಮ, ತಾಲ್ಲೂಕು: ಮೂಡಲಗಿ, ಜಿಲ್ಲೆ: ಬೆಳಗಾವಿ, ಕರ್ನಾಟಕ- 591312 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಾಮಪ್ಪ ಭೀಮಪ್ಪ ಮಡಿಹಳ್ಳಿ ರವರ ಭೂಮಿ, ಪಶ್ಚಿಮಕ್ಕೆ: ತಮ್ಮಣ್ಣ ಬಾಳಪ್ಪ ಕೆಂಚರಡ್ಡಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆರ್‌ಎಸ್ ಸಂ. 167ರ ಭೂಮಿ.					

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್, ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 25.02.2026
ಸ್ಥಳ: ಬೆಳಗಾವಿ, ಕರ್ನಾಟಕ

ಅಸಲು ದಾವಾ ನಂ. 378/2025

ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಬೈಲಹೊಂಗಲ ಇವರ ನ್ಯಾಯಾಲಯದಲ್ಲಿ

1) ಶ್ರೀ ಮಲ್ಲಪ್ಪ ಸದೆಪ್ಪ ತಳವಾರ ...ವಾದಿಯರು

ವಿರುದ್ಧ

1) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಇತರರು ...ಪ್ರತಿವಾದಿಯರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ V ನಿಯಮ 20 ರ ಮೇರೆಗೆ ನೋಟಿಸು

ಪ್ರಸ್ತುತ ದಾವೆಯಲ್ಲಿ ವಾದಿ ಪರ ನ್ಯಾಯವಾದಿಗಳು ಕೊಡುವ ಪ್ರಕಟಣೆ ಏನೆಂದರೆ.

ವಾದಿ ಮಾನ್ಯ ನ್ಯಾಯಾಲಯದಲ್ಲಿ ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾಖಲ ಮಾಡಿಕೊಂಡು ತಾನು ಮಾತ್ರ ಮೃತ ಮಲ್ಲಪ್ಪ ತಂ. ಸದೆಪ್ಪ ತಳವಾರ, ಸಾ. ಕುರಗುಂದ, ತಾ. ಬೈಲಹೊಂಗಲ, ಜಿ. ಬೆಳಗಾವಿ ಈತನ ವಾರಸುದಾರ ಅಂತಾ ಠರಾಯಿಸಿ ಮಾನ್ಯ ನ್ಯಾಯಾಲಯದಿಂದ ಆದೇಶ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯಕ್ಕೆ ಪ್ರಸ್ತುತ ದಾವೆಯನ್ನು ದಾಖಲ ಮಾಡಿಕೊಂಡಿದ್ದು ಇರುತ್ತದೆ.

ಈಗ ಸದರ ವ್ಯಾಜ್ಯವು ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ: 25/03/2026 ರಂದು ನಿಗದಿಯಾಗಿರುತ್ತದೆ. ವಾದಿ ತನ್ನ ಹೊರತಾಗಿ ಬೇರೆ ಯಾರಾದರೂ ಮೃತ ಮಲ್ಲಪ್ಪ ಸದೆಪ್ಪ ತಳವಾರ, ಸಾ. ಕುರಗುಂದ, ತಾ. ಬೈಲಹೊಂಗಲ, ಜಿ. ಬೆಳಗಾವಿ ಈತಳ ವಾರಸಾ ಹಕ್ಕು ಕ್ಲೇಮು ಏನಾದರೂ ಇದ್ದಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳು ದಿನಾಂಕ: 25/03/2026 ರಂದು ಮುಂಜಾನೆ 11:00 ಕ್ಕೆ ಮಾನ್ಯ ನ್ಯಾಯಾಲಯದ ಮುಂದೆ ಸ್ವತಃ ಆಗಲಿ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲಿ ಹಾಜರ ಆಗತಕ್ಕದ್ದು ಇಲ್ಲದಿದ್ದರೆ ದಾವೆಯನ್ನು ವಾದಿ ಮಾಗಣಿಯ ಪ್ರಕಾರ ಪರಿಗಣಿಸಿ ಸದರ ದಾವೆಯನ್ನು ಅಂತಿಮವಾಗಿ ಇತ್ಯರ್ಥಪಡಿಸಲಾಗುತ್ತದೆ ಅಂತಾ ಕೊಟ್ಟ ಜಾಹೀರ ಪ್ರಕಟಣೆ.

ಈ ದಿನ ದಿನಾಂಕ: 21/02/2026 ರಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಲಾಯಿತು.

ಬೈಲಹೊಂಗಲ, ದಿನಾಂಕ: 21/02/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಧಾನ ದಿವಾಣಿ ನ್ಯಾಯಾಲಯ ಬೈಲಹೊಂಗಲ
ಸಹಿ/- ಬೆಂಚ್ ಕ್ಲಾರ್ಕ್
ಹೆಚ್ಚುವರಿ ದಿವಾಣಿ ನ್ಯಾಯಾಲಯ ಬೈಲಹೊಂಗಲ
ಸಹಿ/- (ಸಿ. ಕೆ. ಹೊಳೆಪ್ಪನವರ) (Seal)
ವಾದಿಯರ ಪರ ವಕೀಲರು

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House, P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/03/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ) ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :

ಬಾಗಲಕೋಟೆ, ಗಾಂಧಿ ಸರ್ಕಲ್ ಮಹಾಲಿಂಗಪುರ, 0134520700030775, ಭೀಮಪ್ಪ ಗಾಡಿಕರ್, 5500/–, ಸ್ಟಡ್ 1, ಬೆಳಗಾಂ, ಗೋಳವೆಸ್ ಸರ್ಕಲ್ ಬೆಳಗಾಂ, 0121430730017021, ಪ್ರತಾಪ್‌ಸಿಂಗ್ ಚತುರ್‌ಸಿಂಗ್ ಅಗ್ರವಾಲೆ, 264790/–, ಬ್ಯಾಂಗಲ್ 1, ಬಾಗಲಕೋಟೆ, ಹುನಗುಂದ್, 0132520730019116, ಅರ್ಷಾದ್, 77972/–, ಫಿಂಗರ್ ರಿಂಗ್ಸ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್‌ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಲಿ. ಪರವಾಗಿ

ಕನ್ನಡಪ್ರಭ

ಪ್ರತಿ ಭಾನುವಾರ ಪ್ರಚಲಿತ ವಿದ್ಯಮಾನ, ಸಾಹಿತ್ಯ, ಚಿಣ್ಣರಾಟ, ಪ್ರವಾಸ, ಆಹಾರ ವಿಷಯಗಳ ಸಮೃದ್ಧ ಮಾಹಿತಿ ಭಾನುಪ್ರಭ

ART | LITERATURE | CULTURE | FOOD | TRAVEL

ಭಾನುಪ್ರಭ

ಉದ್ಯಮಿಯಾಗುವ ಕನಸನ್ನು ನನಸಾಗಿಸಿಕೊಂಡ

ಎಂ.ವಿನಯ್‌ಕುಮಾರ್

ಸಮಾಜಸೇವೆಯನ್ನು ಗುರಿಯಾಗಿಸಿಕೊಂಡು, ಸಕ್ರಿಯಾಶೀಲ ಬೆಳವಣಿಗೆಯೊಂದಿಗೆ, ಯುವ ಉದ್ಯಮಿಯಾಗಿ ಬೆಳವಣಿಗೆ ಸಾಧಿಸುತ್ತಿರುವವರು ಎಂ.ವಿನಯ್‌ಕುಮಾರ್. ಮೂವತ್ತಾರು ವರ್ಷದ ವಿನಯ್‌ಕುಮಾರ್ ಹುಟ್ಟಿದ್ದು ಮಂಡ್ಯದಲ್ಲಿ, ತಂದೆ ಮಂಜುನಾಥ್. ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವ್ಯವಸ್ಥಾಪಕರು. ತಾಯಿ ರಾಜೇಶ್ವರಿ ಸಮಾಜಮುಖಿ ಕೆಲಸಗಳಲ್ಲಿ ನಿರತರಾಗಿದ್ದಾರೆ.

ಎಂ.ವಿನಯ್‌ಕುಮಾರ್ ಓದಿದ್ದು ಮೆಕ್ಯಾನಿಕಲ್ ಇಂಜಿನಿಯರ್. 2013ರಲ್ಲಿ ಪದವಿ ಗಳಿಸಿದ ಇವರು ಮೈಷುಗರ್ ಕರ್ಖಾನೆಯಲ್ಲಿ ಟ್ರೈನಿ ಆಗಿ ಆರು ತಿಂಗಳು ಕೆಲಸ ನಿರ್ವಹಿಸಿದರು. ಚಿಕ್ಕವಯಸ್ಸಿನಿಂದಲೂ ಉದ್ಯಮಿಯಾಗುವ ಕನಸು ಹೊತ್ತವರು. ತಾವು ಕಟ್ಟಿದ್ದ ಕನಸನ್ನು ನನಸಾಗಿಸಿಕೊಳ್ಳಲು ಆರಂಭದಲ್ಲಿ ಬೆಂಗಳೂರು ಡೋರ್ ಪ್ಲಾಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿದರು. ಆ ಮೂಲಕ ಭಾರತದಲ್ಲಿ ಮೊದಲ ಬಾರಿಗೆ ಗಿಡಗಳನ್ನು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ತೆಗೆದುಕೊಳ್ಳುವ ಸಂಸ್ಥೆಯನ್ನು ಹುಟ್ಟುಹಾಕಿದರು. ಮಾಜಿ ಸಚಿವ ಜನಾರ್ದನ ರೆಡ್ಡಿ ಮಗಳ ವಿವಾಹಕ್ಕೆ ಇವರ ಸಂಸ್ಥೆಯಿಂದ 50ಸಾವಿರ ಶ್ರೀಗಂಧ, ತುಳಸಿ ಗಿಡಗಳನ್ನು ನೀಡಲಾಗಿತ್ತು.

2018ರಲ್ಲಿ ಮಂಡ್ಯದಲ್ಲಿ ಪ್ರತಿಷ್ಠಿತ ಹೀರೋ ಎಲೆಕ್ಟ್ರಿಕ್ ಕಂಪನಿಯ ಎಲೆಕ್ಟ್ರಿಕ್ ಸ್ಕೂಟರ್‌ಗಳು ಮಾರುಕಟ್ಟೆಗೆ ಬಿಡುಗಡೆಯಾದವು. ವಿನಯ್ ಕುಮಾರ್ ಆ ಕಂಪನಿಯ ಡೀಲರ್‌ಶಿಪ್ ಪಡೆದುಕೊಂಡು ಇ-ಮಾಂಡವ್ಯ ಮೋಟಾರ್ಸ್ ಎಲೆಕ್ಟ್ರಿಕಲ್ ವೆಹಿಕಲ್ ಶೋರೂಂ ಮತ್ತು ಸರ್ವೀಸ್ ಸೆಂಟರ್‌ನ್ನು ಮಂಡ್ಯದಲ್ಲಿ ತೆರೆದರು. ಇದರೊಂದಿಗೆ ತಾವು ಉದ್ಯಮಿಯಾಗುವ ಕನಸನ್ನು ನನಸು ಮಾಡಿಕೊಂಡರು.

ಒಬ್ಬ ಉದ್ಯಮಿಯಾಗಿ ತಾನು ಗಳಿಸಿದ ಲಾಭವನ್ನು ಜನರಿಗೆ ಕೊಡಬೇಕೆಂಬ ಆಸೆಯನ್ನು ಹೊತ್ತವರು ವಿನಯ್‌ಕುಮಾರ್. ಪ್ರಾಮಾಣಿಕವಾಗಿ ಎಲೆಕ್ಟ್ರಿಕ್ ವೆಹಿಕಲ್ ಉದ್ಯಮ ನಡೆಸಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಶೋ ರೂಂ ತೆರೆದರು.

ಎಲೆಕ್ಟ್ರಿಕ್ ಸ್ಕೂಟರ್‌ಗಳ ಬಗ್ಗೆ ಆಗಿನ್ನೂ ಜನರಿಗೆ ಹೆಚ್ಚು ತಿಳಿದಿರಲಿಲ್ಲ. ಹಾಗಾಗಿ ಹಳ್ಳಿ ಹಳ್ಳಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಿ ಉದ್ಯಮ ವನ್ನು ಯಶಸ್ವಿಯಾಗಿ ಮುನ್ನಡೆಸಿದರು. ಮೂರು ವರ್ಷದಲ್ಲಿ ಮೂರು ಸಾವಿರಕ್ಕೂ ಹೆಚ್ಚು ವಾಹನಗಳನ್ನು ಮಾರಾಟ ಮಾಡಿ ಯಶಸ್ವಿ ಉದ್ಯಮಿ ಎನಿಸಿದರು. ಇವರ ಕಾರ್ಯವ್ಯಾಪ್ತಿ ಮಂಡ್ಯಕ್ಕಷ್ಟೇ ಸೀಮಿತವಾಗಿರದೆ 2023ರಲ್ಲಿ ಮೈಸೂರಿನಲ್ಲಿ ಒಡೆಯರ್ ಎಲೆಕ್ಟ್ರಿಕ್ ವೆಹಿಕಲ್ ಮೋಟರ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಶೋರೂಂ ತೆರೆದರು. ನಂತರ ಪಾಂಡವಪುರಕ್ಕೂ ವಿಸ್ತರಣೆ ಮಾಡಿದರು.

ಎಲೆಕ್ಟ್ರಿಕ್ ವೆಹಿಕಲ್‌ಗೆ ಮುಖ್ಯವಾಗಿ ಮೋಟಾರ್, ಕಂಟ್ರೋಲರ್, ಕನ್ವರ್ಟರ್, ಚಾರ್ಜರ್ ಇನ್ನಿತರ ಸಾಮಗ್ರಿಗಳು ಅವಶ್ಯವಾಗಿ ಬೇಕಿವೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಮಂಡ್ಯದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕಂಟ್ರೋಲರ್ ಕಾಂಪೋನೆಂಟ್ ತಯಾರಿಸುವ ಕಂಪನಿಯೊಂದನ್ನು ಆರಂಭಿಸುವ ಉದ್ದೇಶವನ್ನು ವಿನಯ್‌ಕುಮಾರ್ ಹೊಂದಿದ್ದಾರೆ.

ಪಪಾಸ್ಕಂದ ಪ್ರೈವೇಟ್ ಲಿಮಿಟೆಡ್‌ನಡಿ ಇಸ್ತ್ರೀ ಡಾಟ್ ಕಾಮ್ ಇನ್ನಿತರ ಕಾರ್ಯಚಟುವಟಿಕೆಗಳನ್ನು ಆರಂಭಿಸಿ ಕನಿಷ್ಠ 500 ಜನರಿಗೆ ಕೆಲಸ ಕೊಡುವ ನಿಟ್ಟಿನಲ್ಲಿ ಒಂದಷ್ಟು ಯೋಜನೆಗಳನ್ನು ರೂಪಿಸಿಟ್ಟುಕೊಂಡಿದ್ದಾರೆ.

ಉದ್ಯಮ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಪತ್ನಿ ಕೂಡ ಬೆಂಬಲವಾಗಿ ನಿಂತಿದ್ದಾರೆ. ಕುಟುಂಬ ನಿರ್ವಹಣೆಯ ಜೊತೆಯಲ್ಲೇ ಪತಿಗೆ ಎಲ್ಲ ರೀತಿಯಲ್ಲೂ ಸಹಕಾರಿಯಾಗಿ ಅವರ ಕನಸುಗಳ ಸಾಕಾರಕ್ಕೆ ಹೆಗಲುಕೊಟ್ಟಿದ್ದಾರೆ. ಯಶಸ್ವಿ ಪುರುಷನ ಬೆನ್ನಹಿಂದೆ ಒಬ್ಬ ಹೆಣ್ಣು ಇರುತ್ತಾಳೆಂಬುದನ್ನು ಸಾಬೀತು ಪಡಿಸಿದ್ದಾರೆ. ವಿನಯ್‌ಕುಮಾರ್ ತಂದೆ-ತಾಯಿ, ಪತ್ನಿ, ಹಾಗೂ ಇಬ್ಬರು ಪುತ್ರಿಯರೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ.

ಉದ್ಯಮ ಮತ್ತು ಸಮಾಜ ಎರಡೂ ವಿಷಯಗಳನ್ನು ಸಮಚಿತ್ತ ಭಾವದಿಂದ ತೆಗೆದುಕೊಂಡು ಹೋಗುವ ದಿಸೆಯಲ್ಲಿ ಮಹತ್ವದ ಹೆಜ್ಜೆಯನ್ನಿಡುತ್ತಿರುವವರು ಎಂ.ವಿನಯ್‌ಕುಮಾರ್ ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ.

ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸ್ಥಾಪಿಸಿ ಸಮಾಜಸೇವೆ

ವಿನಯ್‌ಕುಮಾರ್ ಉದ್ಯಮಿಯಾಗಬೇಕೆಂಬ ಕನಸನ್ನು ಸಾಕಾರಗೊಳಿಸಿಕೊಳ್ಳುವುದರ ಜೊತೆಗೆ ಸಮಾಜಮುಖಿಯಾಗಿ ಒಂದಷ್ಟು ಸೇವೆ ಮಾಡಬೇಕೆಂಬ ಹಂಬಲವನ್ನೂ ಹೊತ್ತಿದ್ದಾರೆ. ಮಂಡ್ಯ ರೈತರು, ಯುವಕರು, ಅಶಕ್ತರ ಪರವಾಗಿ ಕೆಲಸ ಮಾಡಬೇಕೆಂಬ ಸದುದ್ದೇಶದೊಂದಿಗೆ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಆರಂಭಿಸಿದರು.

ಕಳೆದ ಆರೇಳು ವರ್ಷಗಳಿಂದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇದುವರೆಗೆ ಕಾರ್ಯಕ್ರಮಕ್ಕೆ ಯಾರಿಂದಲೂ ಹಣ ಪಡೆದ ಉದಾಹರಣೆಯೇ ಇಲ್ಲ. ತಮ್ಮ ಶಕ್ತಾನುಸಾರ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ ಎಲ್ಲರ ಪ್ರೀತಿ, ವಿಶ್ವಾಸ, ಮೆಚ್ಚುಗೆ ಗಳಿಸಿದ್ದಾರೆ. ಸಾಹಿತ್ಯ, ಕ್ರೀಡೆ, ಸೇವಾ ಕ್ಷೇತ್ರ, ನಾಟಕ, ಸಂಗೀತ, ಕಲೆ, ಆರೋಗ್ಯ, ಎಲ್ಲರೂ ಒಂದು ಎಂಬ ಭಾವನೆ ಮೂಡಿಸುವುದು ಟ್ರಸ್ಟ್‌ನ ಮುಖ್ಯ ಧ್ಯೇಯವಾಗಿದೆ. ಇದಕ್ಕೆ ಸಂಘ-ಸಂಸ್ಥೆಗಳೂ ಪಕ್ಷಾತೀತವಾಗಿ ಇವರಿಗೆ ಬೆಂಬಲ ಸೂಚಿಸುತ್ತಿವೆ.

ಮಂಡ್ಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ಮಗಳ ಜನ್ಮದಿನದಂದು ತಂದೆಯೇ ಬರೆದ ಪುಸ್ತಕವನ್ನು ಮಗಳಿಗೆ ಅರ್ಪಿಸಿ ಯಾವುದೇ ಅಬ್ಬರವಿಲ್ಲದೆ ಹುಟ್ಟುಹಬ್ಬ ಆಚರಿಸಿ ಕೊಂಡರು. ಸಂಸ್ಕೃತಿಗೆ ಅನುಗುಣವಾಗಿ ಸತ್ಯಾವತಾರ ಕಾರ್ಯಕ್ರಮ ಆಯೋಜಿಸಿ ಮಂಡ್ಯ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000 | ಫ್ಯಾಕ್ಸ್: +91 44 4564 4022.

ಅಪೆಂಡಿಕ್ಸ್ IV [ನಿಯಮ 8(1)]
ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಳಿಗಾಗಿ)

ಆದಾಗ್ಯೂ, ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಅಧಿಕೃತ ಅಧಿಕಾರಿಯಾಗಿ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಹಾಗೂ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆಗೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13(12)ರಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ದಿನಾಂಕ **31.10.2025**ರ ಡಿಮಾಂಡ್ ನೋಟೀಸೊಂದನ್ನು ಸಾಲಗಾರರು, ಸಹ-ಸಾಲಗಾರರು ಮತ್ತು ಜಾಮೀನುದಾರರು **1. ಮಹಾಲಿಂಗ್ ಬೆನಳ್ಳಿ 2. ಸುಜಾತಾ ಮಹಾಲಿಂಗ್ ಬೆನಳ್ಳಿ**, ಇವರುಗಳಿಗೆ ನೋಟೀಸ್ ಜಾರಿಮಾಡಿ ನೋಟೀಸಿನಲ್ಲಿ ನಮೂದಿಸಿದ **31.10.2025**ರಂದು ಇದ್ದಂತೆ ಬಾಕಿಯಾಗಿರುವ **ಮೊತ್ತ ರೂ.9,46,483.16/- (ಒಂಭತ್ತು ಲಕ್ಷದ ನಲವತ್ತಾರು ಸಾವಿರದ ನಾಲ್ಕುನೂರ ಎಂಭತ್ಮೂರು ರೂ. ಮತ್ತು ಹದಿನಾರು ಪೈಸೆ ಮಾತ್ರ)**ಗಳನ್ನು ಸದರಿ ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗಾಗಿ ಮರುಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು ಸಾಲ ಮರುಪಾವತಿ ಮಾಡಲು ವಿಫಲರಾದುದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೇ, ಕೆಳಸಹಿದಾರರು ಅವರಿಗೆ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಕಲಂ 13ರ ಉಪಬಂಧ (4) ರಡಿ ಅವರಿಗೆ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳ **ಸ್ವಾಧೀನತೆಯನ್ನು 2026ರ ಫೆಬ್ರವರಿ 23ರಂದು** ಪಡೆದುಕೊಂಡಿರುತ್ತಾರೆ.

ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೇ, ಸಾಲಕ್ಕಾಗಿ ಒದಗಿಸಿರುವ ಭದ್ರತಾ ಆಸ್ತಿಗಳ ಜೊತೆ ಯಾರೂ ಯಾವುದೇ ರೀತಿಯ ವ್ಯವಹಾರ ಮಾಡಬಾರದು ಮಾಡಿದ್ದೇ ಆದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)ಗೆ ಬಾಕಿಯಾಗಿರುವ **ಮೊತ್ತ ರೂ.9,46,483.16/- (ಒಂಭತ್ತು ಲಕ್ಷದ ನಲವತ್ತಾರು ಸಾವಿರದ ನಾಲ್ಕುನೂರ ಎಂಭತ್ಮೂರು ರೂ. ಮತ್ತು ಹದಿನಾರು ಪೈಸೆ ಮಾತ್ರ)** ಮತ್ತು ಬಡ್ಡಿ ಸೇರಿದ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸಾಲಗಾರರ ಗಮನವನ್ನು ಕಾಯಿದೆಯ ಕಲಂ 13ರ ಉಪ-ಬಂಧ (8)ರ ಕಟ್ಟಳೆಗಳ ಬಗ್ಗೆ ಗಮನ ಸೆಳೆಯಲಾಗಿದೆ. ಇದರಲ್ಲಿ ಭದ್ರತಾ ಆಸ್ತಿಗಳನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಕಾಲಾವಕಾಶದ ಬಗ್ಗೆ ತಿಳಿಸಲಾಗಿದೆ.

ಸ್ಥಿರಾಸ್ತಿಗಳ ವಿವರಣೆ

ಐಟಂ ಸಂ.1: ಸಕಲ ಸಮಸ್ತವೂ ಸೇರಿದಂತೆ ಗ್ರಾಮ ಪಂಚಾಯತ್ ಸಂ.249 ಕರೆಸ್ಪಾಡಿಂಗ್ ಆರ್‌ಡಿಪಿಆರ್ ಸಂ. 150400801300120226, ಅಳತೆ ಪೂರ್ವ-ಪಶ್ಚಿಮ ಅಳತೆ: 4.75 ಮೀ.ಗಳು, ಉತ್ತರ-ದಕ್ಷಿಣ: 4.50 ಮೀ.ಗಳು, ಒಟ್ಟು ಅಳತೆ 21.37 ಚ.ಮೀ.ಗಳು, ಇಟ್ನಾಳ್ ಗ್ರಾಮ, ತಾ:ರಾಯಬಾಗ್, ಜಿಲ್ಲೆ: ಬೆಳಗಾವಿ, ಕರ್ನಾಟಕ-591235, ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಸಾರ್ವಜನಿಕ ರಸ್ತೆ, ಪಶ್ಚಿಮಕ್ಕೆ: ಸ್ವಂತ ಖಾಲಿ ಜಾಗ, ಉತ್ತರಕ್ಕೆ: ಪಾದಚಾರಿ ರಸ್ತೆ, ದಕ್ಷಿಣಕ್ಕೆ : ಮಾರುತಿ ಸಿದ್ದಪ್ಪ ಭಾಗೋಲ್

ಐಟಂ ಸಂ. 2:- ಸಕಲ ಸಮಸ್ತವೂ ಸೇರಿದಂತೆ ಗ್ರಾಮ ಪಂಚಾಯತ್ ಸಂ. 250 ಕರೆಸ್ಪಾಡಿಂಗ್ ಆರ್‌ಡಿಪಿಆರ್ ಸಂ.150400801300120224, ಅಳತೆ: ಪೂರ್ವ-ಪಶ್ಚಿಮ 4.75 ಮೀ.ಗಳು, ಉತ್ತರ-ದಕ್ಷಿಣಕ್ಕೆ: 4.50 ಮೀ.ಗಳು, ಒಟ್ಟು ಅಳತೆ 21.37 ಚ.ಮೀ.ಗಳು ಇಟ್ನಾಳ್ ಗ್ರಾಮ, ತಾ: ರಾಯಬಾಗ್, ಜಿಲ್ಲೆ: ಬೆಳಗಾವಿ, ಕರ್ನಾಟಕ-591235, ಮತ್ತು ಚಕ್ಕುಬಂದಿ:- ಪೂರ್ವಕ್ಕೆ: ಸ್ವಂತ ಖಾಲಿ ಜಾಗ, ಪಶ್ಚಿಮಕ್ಕೆ: ಲಕ್ಷ್ಮಿ ರಮೇಶ್ ಹಡಪದ್, ಉತ್ತರಕ್ಕೆ: ಪಾದಚಾರಿ ರಸ್ತೆ, ದಕ್ಷಿಣ: ಮಾರುತಿ ಸಿದ್ದಪ್ಪ ಭಾಗೋಲ್

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

ದಿನಾಂಕ: 23.02.2026
ಸ್ಥಳ: ಕರ್ನಾಟಕ
ಸಾಲದ ಖಾತಾ ಸಂ. 125926444

ಎಕ್ಸಿಸ್ ಬ್ಯಾಂಕ್

ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009

ಸ್ವಾಧೀನ ನೋಟಿಸ್ ಅಪೆಂಡಿಕ್ಸ್–IV (ನಿಯಮ 8(1)

ಕೆಳಸಹಿದಾರರು **ಎಕ್ಸಿಸ್ ಬ್ಯಾಂಕ್ ಲಿ.** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ರ ಅನ್ವಯ ಮತ್ತು 2002 ರ ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳ ನಿಯಮ 3 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಸಾಲದ ಖಾತೆಗಳು **(1) ಶ್ರೀ. ಬಸವರಾಜ ಅಪ್ಪಣ್ಣ ತೋಡಕರ ಬಿನ್** ಶ್ರೀ. ಅಪ್ಪಣ್ಣ ರಾಮು ತೊಡಕರ್, ಡಂಗಿ ಗಲ್ಲಿ, ಅಥಣಿ, ಬೆಳಗಾವಿ, ಹನುಮಾನ್ ದೇವಸ್ಥಾನದ ಹತ್ತಿರ, ಕರ್ನಾಟಕ–591304. **ಮತ್ತೊಂದು ವಿಳಾಸ : ಶ್ರೀ. ಬಸವರಾಜ ಅಪ್ಪಣ್ಣ ತೋಡಕರ** ಬಿನ್ ಶ್ರೀ. ಅಪ್ಪಣ್ಣ ರಾಮು ತೋಡಕರ್, ಪ್ಲಾಟ್ ನಂ.04, ಆರ್.ಎಸ್.ನಂ. 984/ಇ, ಅಥಣಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ, ಕರ್ನಾಟಕ–591304. **(ಸಾಲಗಾರರು/ ಅರ್ಜಿದಾರರು) (2) ಶ್ರೀಮತಿ. ಸುನೀತಾ ಬಸವರಾಜ ತೊಡಕರ** ಕೋಂ ಶ್ರೀ. ಬಸವರಾಜ ಅಪ್ಪಣ್ಣ ತೋಡಕರ್, ಡಂಗಿ ಗಲ್ಲಿ, ಮನೆ ನಂ. 3126/3131, ಅಥಣಿ ಗ್ರಾಮ, ಬೆಳಗಾವಿ, ಹನುಮಾನ್ ದೇವಸ್ಥಾನದ ಹತ್ತಿರ, ಕರ್ನಾಟಕ – 591304 **ಮತ್ತೊಂದು ವಿಳಾಸ : ಶ್ರೀಮತಿ ಸುನೀತಾ ಬಸವರಾಜ್ ತೋಟಕರ್** ಕೋಂ ಶ್ರೀ. ಬಸವರಾಜ ಅಪ್ಪಣ್ಣ ತೋಡಕರ, ಪ್ಲಾಟ್ ನಂ.04, ಆರ್.ಎಸ್.ನಂ. 984/ಇ, ಅಥಣಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ, ಕರ್ನಾಟಕ–591304. **(ಸಹ ಅರ್ಜಿದಾರರು/ ಜಾಮೀನುದಾರರು)** ಇವರಿಗೆ **ದಿನಾಂಕ: 16.10.2025** ರಿಂದ ಬಾಕಿ ಇರುವ ಮೊತ್ತ **ಖಾತೆ ನಂ. PHR013809288111, ರೂ. 27,48,886/–** (ರೂಪಾಯಿ ಇಪ್ಪತ್ತೇಳು ಲಕ್ಷದ ನಲವತ್ತೆಂಟು ಸಾವಿರದ ಎಂಟುನೂರ ಎಂಭತ್ತಾರು ಮಾತ್ರ) ಇವರಿಗೆ **ದಿನಾಂಕ : 21.10.2025** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿದಾರರು ಸದರಿ ನಿಯಮಾವಳಿ 6 & 8 ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಸೆಕ್ಷನ್ 13(4) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಪ್ರಕಾರ **ದಿನಾಂಕ: 24.02.2026 ರಂದು** ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು ಮತ್ತು ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಎಕ್ಸಿಸ್ ಬ್ಯಾಂಕ್ ಲಿ.**, ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ. 27,48,886/–** (ರೂಪಾಯಿ ಇಪ್ಪತ್ತೇಳು ಲಕ್ಷದ ನಲವತ್ತೆಂಟು ಸಾವಿರದ ಎಂಟುನೂರ ಎಂಭತ್ತಾರು ಮಾತ್ರ) ಇವರಿಗೆ **ದಿನಾಂಕ : 16.10.2025 ರಿಂದ** ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಸರ್ಫೇಸಿ ಕಾಯಿದೆ 2002, ಸೆಕ್ಷನ್ 13(8)ರ ಅನ್ವಯ ಇರುತ್ತದೆ.

ಅಡಮಾನ ಆಸ್ತಿಯ ವಿವರ

ಷೆಡ್ಯೂಲ್ : ಆಸ್ತಿಯು ಶ್ರೀಮತಿ ಸುನೀತಾ ಬಸವರಾಜ ತೊಡಕರ್ ರವರ ಹೆಸರಿನಲ್ಲಿದೆ.

ಐಟಂ ನಂ.1 : ಸ್ಥಿರಿನ ಸರ್ವೆ ನಂ. 984/ಇ, ಪ್ಲಾಟ್ ನಂ. 04, ಪ್ರದೇಶದ ವಿಸ್ತೀರ್ಣ 0–01–01–10, (108–11 ಚದರ ಮೀಟರ್), ಆಸ್ತಿಯು ಅಥಣಿಯಲ್ಲಿದೆ. ಚಕ್ಕುಬಂದಿ : (ಮಾರಾಟ ಪತ್ರದ ಪ್ರಕಾರ) : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ. 984/ಎ, ಉತ್ತರಕ್ಕೆ : ಪ್ಲಾಟ್ ನಂ. 03, ದಕ್ಷಿಣಕ್ಕೆ : ಪ್ಲಾಟ್ ನಂ. 05.

ಯಾವುದೇ **ಮಾಹಿತಿಗಾಗಿ ಶ್ರೀ.ಪ್ರೇಮ್ ಮೊಬೈಲ್ ನಂ. 8880041234** ರವರನ್ನು ಸಂಪರ್ಕಿಸಿ.

ದಿನಾಂಕ: 24.02.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿ.,

ಎಫ್.ಡಿ.ಪಿ. ನಂ. 4/2023

ಮಾನ್ಯ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು (ಕಿ.ವಿ) ಸವದತ್ತಿ. ಸಂಚಾರಿ ಪೀಠ: ಯರಗಟ್ಟಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಮುರಿಗೆಪ್ಪ ತಂದೆ ಮಹಾದೇವಪ್ಪ ಲಕ್ಷೆಟ್ಟಿ ಮತ್ತು ಇತರರು

ವಿರುದ್ಧ

ಎದುರುದಾರರು : ಶ್ರೀ ವಿರುಪಾಕ್ಷಿ ತಂದೆ ಮುಂಡಪ್ಪ ಲಕ್ಷೆಟ್ಟಿ ಮತ್ತು ಇತರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ಸಲ್ಲಿಸುವ ನೋಟಿಸು

ಸದರಿ ಪ್ರಕರಣವನ್ನು ಅರ್ಜಿದಾರರು/ ವಾದಿಯರು ಮಾನ್ಯ ನ್ಯಾಯಾಲಯದಲ್ಲಿ ಪಾಲು ವಾಟ್ನಿ ಕೇಳಿ ಸಲ್ಲಿಸಿದ ಅಸಲು ದಾವೆ ನಂ. 193/2020 ನೇದ್ದವು ದಿನಾಂಕ: 26/09/2022 ರಂದು ನ್ಯಾಯಾಲಯವು ಡಿಕ್ರಿ ಆಗಿದ್ದು, ಸದರಿ ಡಿಕ್ರಿ ಆದೇಶದ ಪ್ರಕಾರ ವಿಭಾಗವನ್ನು ಮಾಡಿಕೊಡಲು ಸದರಿ ಅರ್ಜಿಯನ್ನು ಎದುರುದಾರರ ವಿರುದ್ಧ ದಾಖಲು ಮಾಡಿದ್ದು ಇರುತ್ತದೆ. ಸದರಿ ಎದುರುದಾರ ನಂ.6: ಶ್ರೀಮತಿ ಪ್ರತಿಭಾ ತಂದೆ ಅನ್ನಪ್ಪ ಲಕ್ಷೆಟ್ಟಿ, ವಯಾ: 48 ವರ್ಷ, ಮತ್ತು ಎದುರುದಾರ ನಂ: 11, ವಿರೇಶ ತಂದೆ ಸಂತೋಷ ಲಕ್ಷೆಟ್ಟಿ, ವಯಾ: 11, ಉದ್ಯೋಗ: ವಿಧ್ಯಾರ್ಥಿ, ಇಬ್ಬರೂ ಸಾ: ಬಸವ ನಗರ, ತಾ: ಗೋಕಾಕ, ಜಿ: ಬೆಳಗಾವಿ–591307, ಇವರು ನೋಟಿಸ್ಸು ಪಡೆಯದೆ ಇರುವುದರಿಂದ ಈ ಸಾರ್ವಜನಿಕ ನೋಟಿಸ್ಸು ನೀಡಿದ್ದು ಇರುತ್ತದೆ.

ಈ ಕುರಿತು ಯಾರಿಗಾದರೂ ಯಾವುದೇ ತಂಟೆವ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ಅಧಿಕಾರ ಪಡೆದ ವಕೀಲರ ಮೂಲಕ ದಿನಾಂಕ: 06/04/2026 ರಂದು ಬೆಳಿಗ್ಗೆ 11:00 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮನ್ನು ಏಕತರ್ಫಿ ಮಾಡಿ ಪ್ರಕರಣವನ್ನು ನಿರ್ಣಯಿಸಿ ಮುಂದಿನ ಆದೇಶ ಮಾಡಲು ಬರುವುದು ತಿಳಿಯಿರಿ.

ಇಂದು 24/02/2026 ರಂದು ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ಕೊಡಲ್ಪಟ್ಟಿದೆ.

ಸವದತ್ತಿ, ದಿನಾಂಕ: 24/02/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– (ಎಮ್. ಬಿ. ಅಂಗಡಿ), ಶಿರಸ್ತೇದಾರರು
ಮಾನ್ಯ 2ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಸವದತ್ತಿ/ಯರಗಟ್ಟಿ ನ್ಯಾಯಾಲಯ
ಸಹಿ/– (ಶ್ರೀ ಎಮ್. ಎಫ್. ಬಾಡಿಗೇರ) (Seal)
ಅರ್ಜಿದಾರರ ಪರ ವಕೀಲರು, ಸವದತ್ತಿ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

CIN : L65110TN2014PLC097792

ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031. ದೂ: +91 44 4564 4000/ ಫ್ಯಾಕ್ಸ್ : +91 44 4564 4022

ಅಪೆಂಡಿಕ್ಸ್-IV [ನಿಯಮ-8(1)] ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)

ಆದಾಗ್ಯೂ, ಕೆಳಸಹಿದಾರರು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಅಧಿಕೃತ ಅಧಿಕಾರಿಯಾಗಿ ಹಣಕಾಸು ಆಸ್ತಿಗಳ ಪ್ರಭೂತೀಕರಣ ಮತ್ತು ಪುನರ್ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ನಿರ್ಮಾಣ ಕಾಯಿದೆ, 2002 (ಆ್ಯಕ್ಟ್) ರಡಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ (ರೂಲ್ 3) ನಿಯಮ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಪರಿಚ್ಛೇದ 13(12)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ಸೂಚಿಸಲಾದ ಸಾಲಗಾರರಿಗೆ/ ಸಹ-ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸಾಲದ ಒಪ್ಪಂದ ಪತ್ರದ ಅನುಸಾರ ಮಂಜೂರಾದ ಸಾಲವನ್ನು ಮತ್ತು ಸಂಬಂಧಿಸಿದ ಡಿಮಾಂಡ್ ನೋಟೀಸ್‌ನಲ್ಲಿ ಒತ್ತಾಯಿಸಿರುವಂತೆ ಬಾಕಿಯಾಗಿರುವ ಮೊಬಲಗು ಮತ್ತು ಡಿಮಾಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿ/ ತೀರುವವರೆಗೂ ತದನಂತರದ ಬಡ್ಡಿ ಮತ್ತು ಇತರ ಚಾರ್ಜುಗಳು ಸೇರಿದ ಮೊತ್ತ ಸದರಿ ನೋಟೀಸ್‌ನ್ನು ಸ್ವೀಕರಿಸಿದ 60 ದಿನಗಳೊಳಗಾಗಿ ಪಾವತಿ ಮಾಡಲು ಸೂಚಿಸಿದ್ದರು.

ಸಾಲಗಾರರು/ಸಹ-ಸಾಲಗಾರರು/ ಜಾಮೀನುದಾರರು ಬಾಕಿ ಸಾಲದ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುತ್ತಾರೆ ಈ ಕಾರಣ ಸಾಲಗಾರರಿಗೆ/ಸಹ-ಸಾಲಗಾರರಿಗೆ/ಜಾಮೀನುದಾರರಿಗೆ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ಸೂಚಿಸುವುದೇನೆಂದರೆ, ಕೆಳಸಹಿದಾರರು ಸದರಿ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8ರ ಜೊತೆ ಓದಿಕೊಳ್ಳಬೇಕಾದ ಸದರಿ ಕಾಯಿದೆಯ ಸೆಕ್ಷನ್ 13ರ ಉಪ-ಬಂಧ (4)ರಡಿ ಅವನಿಗೆ/ಅವಳಿಗೆ ಪ್ರದತ್ತವಾದ ಅಧಿಕಾರಗಳಂತೆ/ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ.

ಸಾಲದ ಖಾತಾ ಸಂಖ್ಯೆ	ಸಾಲಗಾರರು/ ಸಹ- ಸಾಲಗಾರರು/ ಮತ್ತು ಜಾಮೀನುದಾರರ ಹೆಸರು	ಅಡಮಾನಿತ ಆಸ್ತಿಗಳ ವಿವರ	ಡಿಮಾಂಡ್ ನೋಟೀಸ್ ದಿನಾಂಕ	ಡಿಮಾಂಡ್ ನೋಟೀಸ್ ಬಾಕಿ ಮೊತ್ತ (ರೂ.)	ಸ್ವಾಧೀನತೆಯ ವಿಧ ಮತ್ತು ದಿನಾಂಕ
97755402	1. ನಾಗಪ್ಪ ಮ್ಯಾಗಡಿ 2. ಹನುಮವ್ವ ಮ್ಯಾಗಡಿ	ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಸಂ. 304/01, ಅಳತೆ: 30 X 40 ಚ.ಅ. ವಿಳಾಸ: ಧಾವಳೇಶ್ವರ, ತಾ: ಮೂಡಲಗಿ, ಜಿಲ್ಲೆ: ಬೆಳಗಾವಿ, ಬೆಳಗಾಂ ಕರ್ನಾಟಕ- 591227 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀಮತಿ ಕಲ್ಲವ್ವ ಭೀಮಪ್ಪ ಮ್ಯಾಗಡಿ, ಪಶ್ಚಿಮಕ್ಕೆ: ಕೇಶವ್ವ ಮಾರುತಿ ಮ್ಯಾಗಡಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಹನುಮಂತ್ ಭರಮಪ್ಪ ಮ್ಯಾಗಡಿ.	06.12.2025	ರೂ. 6,89,893.47/-	23-02-2026 ಸ್ವಾಧೀನತೆ
108118606	1. ಲಕ್ಷ್ಮಿ ಬಿ ಪಾಟೀಲ್ 2. ಮಲ್ಲೇಶ್ ಬಿ ಪಾಟಿಲಾ	ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ವಿಪಿಸಿ ಸಂ. 1-13, ಸ್ವತ್ತಿನ ಸಂ. 150400503800300015, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 12.10 ಮೀ. ಉತ್ತರದಿಂದ ದಕ್ಷಿಣಕ್ಕೆ: 9.09 ಮೀ. ಒಟ್ಟಾರೆ ಪ್ರದೇಶ: 109.99 ಚದರ ಮೀಟರ್, ಮುನ್ಯಾಲ್ ಗ್ರಾಮ ಮತ್ತು ಗ್ರಾಮ ಪಂಚಾಯತ್, ತಾ: ಮೂಡಲಗಿ, ಜಿಲ್ಲೆ: ಬೆಳಗಾವಿ, ಬೆಳಗಾಂ ಕರ್ನಾಟಕ- 591312 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಹನುಮಂತ್ ಎಸ್ ಕೌಜಲಗಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಶಿವನಪ್ಪ ಬಳಿಗಾರ್, ದಕ್ಷಿಣಕ್ಕೆ: ಗೌಡಪ್ಪ ಪಾಟೀಲ್.	29.11.2025	ರೂ. 7,91,204.34/-	23-02-2026 ಸ್ವಾಧೀನತೆ

ಸಾಲಗಾರರಿಗೆ/ ಸಹ-ಸಾಲಗಾರರಿಗೆ/ ಜಾಮೀನುದಾರರಿಗೆ ಮತ್ತು ಅಲ್ಲದೆ ವಿಶೇಷವಾಗಿ ಸಾರ್ವಜನಿಕರಿಗೆ ನೀಡುವ ಎಚ್ಚರಿಕೆ ಏನೆಂದರೆ ಸದರಿ ಆಸ್ತಿಯೊಂದಿಗೆ ಯಾರು ಯಾವುದೇ ವ್ಯವಹಾರ ಮಾಡಬಾರದು ಹಾಗೂ ಮಾಡಿದ್ದೇ ಆದರೆ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನ (ಹಿಂದಿನ ಕ್ಯಾಪಿಟಲ್ ಫಸ್ಟ್ ಹೋಂ ಫೈನಾನ್ಸ್ ಲಿಮಿಟೆಡ್ ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ) ಡಿಮಾಂಡ್ ನೋಟೀಸಿನ ದಿನಾಂಕದಿಂದ ಪೂರ್ತಿ ಪಾವತಿಯಾಗುವವರೆಗೂ ಬಾಕಿ ಮೊಬಲಗು/ ಇತರೆ ಚಾರ್ಜುಗಳು ಸೇರಿದ ಮೊತ್ತಕ್ಕೆ ಬಾಧ್ಯರಾಗಬೇಕಾಗುತ್ತದೆ.

ಸಹಿ/-ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ)

ದಿನಾಂಕ: 23.02.2026
ಸ್ಥಳ: ಬೆಳಗಾವಿ, ಕರ್ನಾಟಕ